ಶ್ರೀ ಗೋವಿಂದ ಕಾರಜೋಳ : ಮಾನ್ಯ ಸಚಿವರು ಕೊಡುವಂತಹ ಉತ್ತರ ಇದಲ್ಲ. ಇದನ್ನು ನಾವು ಕೇಳುವುದಿಲ್ಲ. ನಿಮ್ಮಿಂದ ನಾವು ಇಂತಹ ಉತ್ತರವನ್ನು ಕೇಳುವುದಕ್ಕೆ ಸದನಕ್ಕೆ ಬಂದಿಲ್ಲ.

(ಗೊಂದಲ)

(ಈ ಹಂತದಲ್ಲಿ ಬಿಜೆಪಿ ಪಕ್ಷದ ಶಾಸಕರು, ಜೆಡಿ(ಎಸ್) ಪಕ್ಷದ ಶಾಸಕರು ಹಾಗೂ ಕೆಜೆಪಿ ಪಕ್ಷದ ಶಾಸಕರು ಸದನದ ಬಾವಿಗೆ ಬಂದು ಸರ್ಕಾರದ ವಿರುದ್ಧ ದಿಕ್ಕಾರ ಕೂಗುತ್ತಿದ್ದರು)

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು) : ಕೇವಲ ವೋಟು ಕೊಟ್ಟವರಿಗಷ್ಟೇ ಕೊಟ್ಟಿರುವುದು ಎಂದು ಹೇಳುವುದು ಸರಿಯಲ್ಲ. ಕಾಂಗ್ರೆಸ್‌ಗೆ ವೋಟ್ ಕೊಟ್ಟಿರುವವರಿಗೆ ಮಾತ್ರ ಕೊಡುತ್ತೀರಿ. ಬೇರೆಯವರಿಗೆ ಕೊಡುವುದಿಲ್ಲೆಂದು ಹೇಳುತ್ತಿದ್ದೀರಿ.

(ಗೊಂದಲ)

ಅಧ್ಯಕ್ಷರು : ಒಂದು ನಿಮಿಷ ತಾಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ನಮಗೆ ಇಲ್ಲಿ ತಾರತಮ್ಯ ಆಗಿದೆ.

ಅಧ್ಯಕ್ಷರು : ಇಲ್ಲಿ ನಿಮ್ಮವರು ಸದನದ ಬಾವಿಯಲ್ಲಿಯೇ ಇದ್ದಾರೆ.

(ಈ ಹಂತದಲ್ಲಿ ಧರಣಿ ನಿರತ ಸದಸ್ಯರುಗಳು ಸರ್ಕಾರದ ವಿರುದ್ಧ ದಿಕ್ಕಾರ ಕೂಗುತ್ತಿದ್ದರು)

(ಗೊಂದಲ)

ಅಧ್ಯಕ್ಷರು : ಒಂದು ನಿಮಿಷ ತಾಳಿ ಮಾನ್ಯ ದತ್ತರವರೆ, ನೀವು ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡಬೇಡಿ, ಮಾನ್ಯ ಸಚಿವರೆ, ದಯವಿಟ್ಟು ಇದಕ್ಕೆ ಏನಾದರೂ ಪರಿಹಾರವನ್ನು ಕಂಡುಹಿಡಿಯಿರಿ.